ಗೆಜೆಟೆಡ್ ಪ್ರೊಬೇಷನರಿಂಗಳ ಸ್ಪರ್ಧಾತ್ಮಕ ಪರೀಕ್ಷೆಯ ಉತ್ತರ ಪತ್ರಿಕೆಗಳು ಕಳೆದು ಹೋಗಿರುವ ಬಗ್ಗೆ.

೭೧(೨೧೯) (ಬಿ) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೩-೮೪ರಲ್ಲಿ ನಡೆದ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಯ ಸುಮಾರು ಇಪ್ಪತ್ತೈದು ಅಭ್ಯರ್ಥಿಗಳ ಉತ್ತರ ಪತ್ರಿಕೆಗಳು ಕಳೆದು ಹೋಗಿರುವುದು ನಿಜವೇ. ಹಾಗೂ ಮರು ಪರೀಕ್ಷೆ ನಡೆಸಿರುವುದು ಸರಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತನಿಖೆ ನಡೆಸಿ ಕ್ರಮ ತೆಗೆದು ಕೊಳ್ಳಲಾಗಿದೆಯೆ;

ಇ) ಹಾಗಿಲ್ಲದಿದ್ದಲ್ಲಿ, ಈ ಕೂಡಲೇ ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೯೮೩-೮೪ನೇ ಸಾಲಿನಲ್ಲಿ(೧೯೮೩-೮೪ನೇ ಸಾಲಿನಲ್ಲಿ), ೩೧ ಉತ್ತರ ಪತ್ರಿಕೆಗಳು ಕಳೆದು ಹೋಗಿದ್ದು, ಅಂತಹ ಅಭ್ಯರ್ಥಿಗಳಿಗೆ ಮರು ಪರೀಕ್ಷೆಯನ್ನು ನಡೆಸಲಾಗಿದೆ.

ಆ) ಈ ಪ್ರಕರಣದಲ್ಲಿ ಅಪರಾಧ ತನಿಖಾ ವಿಭಾಗದ ಮುಖೇನ ಸಂಬಂಧಿಸಿದ ಅಧಿಕಾರಿಗಳ ಮೇಲೆ ವಿಚಾರಣೆ ನಡೆಸಿದ್ದು, ಇದರ ವರದಿಯ ಆಧಾರದ ಮೇಲೆ ಈ ಪ್ರಕರಣವನ್ನು ವಿಚಾರಣೆಗಾಗಿ ಕರ್ನಾಟಕ ಲೋಕಾಯುಕ್ತಕ್ಕೆ ವಹಿಸಲಾಗಿದೆ.

ಇ) (ಆ) ಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಡಿಸ್ಟಿಲರಿ ಹಾಗೂ ಮದ್ಯದಂಗಡಿಗಳ ಬಗ್ಗೆ

೭೨(೨೨೭) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ (ಆರೋಗ್ಯ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧೯೮೩-೮೪ ರಿಂದ ಇಲ್ಲಿಯವರೆಗೆ ರಾಜ್ಯ ಸರ್ಕಾರದವರು ಎಷ್ಟು ಡಿಸ್ಟಿಲರಿಗಳಿಗೆ ಹಾಗೂ ಮದ್ಯದಂಗಡಿಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ.

ಆ) ೧೯೮೩-೮೪ಕ್ಕಿಂತ ಮುಂಚೆ ಲೈಸನ್ಸ್ ನೀಡಿದ್ದ ಮದ್ಯದಂಗಡಿಗಳ ಸಂಖ್ಯೆ ಎಷ್ಟು ಹಾಗೂ ಸದರಿ ಅಂಗಡಿಗಳಿಗೆ ಲೈಸನ್ಸ್ ನೀಡುವಾಗ ಕಾನೂನನ್ನು ತಪ್ಪದೆ ಅನುಸರಿಸಲಾಗಿದ್ದೀತೆ?

ಶ್ರೀ ಪೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಸಚಿವರು).—

ಅ) ೧೯೮೩-೮೪ ರಿಂದ ಇಲ್ಲಿಯವರೆಗೆ ಈ ಕೆಳಕಂಡಹೊಸ ಭಟ್ಟಿ ಕಾರ್ಖಾನೆಗಳಿಗೆ ಸನ್ನದನ್ನು ನೀಡಲಾಗಿದೆ.

(೧) ಮೈಸೂರು ಪೇಪರ್‌ಮಿಲ್ಸ್, ಲಿಮಿಟೆಡ್, ಭದ್ರಾವತಿ.

(೨) ಕರ್ನಾಟಕ ಗೋಡಂಬಿ ಅಭಿವೃದ್ಧಿ ನಿಗಮ, ಮಂಗಳೂರು.

(ಆ) ೧೯೮೩-೮೪ ರಿಂದ ಇಲ್ಲಿಯವರೆಗೆ ೧೧೩೦ ಮದ್ಯದ ಅಂಗಡಿಗಳಿಗೆ ಹೊಸ ಸನ್ನದ್ದುಗಳನ್ನು ನೀಡಲಾಗಿದೆ.

೧೯೮೩-೮೪ ಕ್ಕಿಂತ ಮುಂಚೆ ೧೭೮೬ ಮದ್ಯದ ಅಂಗಡಿಗಳಿಗೆ ಸನ್ನದ್ದನ್ನು ಕೊಡಲಾಗಿದೆ ಸದರಿ ಮದ್ಯದ ಅಂಗಡಿಗಳಿಗೆ ಪರವಾನಿಗೆಯನ್ನು ಕೊಡುವಾಗ ಕಾನೂನನ್ನು ಅನುಸರಿಸಲಾಗಿದೆ.